

# ಸುದ್ದಿಯ ಶೃಂಗದಲ್ಲಿ ನೇಮರ್

‘ನಾನೀಗ ಅತ್ಯಾಚಾರದ ಆರೋಪಿ. ನನ್ನ ಮೇಲೆ ಮೊಕದ್ದಮೆ ಹೂಡಲಾಗಿದೆ. ಇದು ಗಂಭೀರ ಆರೋಪ. ಅಚ್ಚರಿಯ ಜೊತೆಗೆ ದುಃಖವೂ ಆಗುತ್ತಿದೆ. ನನ್ನನ್ನು ಬಲ್ಲವರಿಗೆ ನನ್ನ ನಡತೆಯ ಬಗ್ಗೆ ಗೊತ್ತಿದೆ. ನಾನು ಹೀಗೆ ಮಾಡಲ್ಲ ಅನ್ನೋದೂ ಗೊತ್ತಿದೆ. ಅವತ್ತು ಏನು ನಡೆದಿದೆಯೋ ಅದು ಪರಸ್ಪರ ಸಮ್ಮತಿಯಿಂದಲೇ ನಡೆದಿದೆ. ನನ್ನ ಮತ್ತು ಆಕೆಯ ನಡುವಣ ಸಂಬಂಧ, ಯಾವುದೇ ಗಂಡು–ಹೆಣ್ಣಿನ ಸಂಬಂಧದಂತೆ. ಆದರೆ ಅವತ್ತಿನದ್ದು ಆಕೆ ಪ್ಲ್ಯಾನ್ ಮಾಡಿ ನಡೆಸಿದ ಕೃತ್ಯ..’

–ಬ್ರೆಜಿಲ್ ತಂಡದ ದೈತ್ಯ ಫುಟ್‌ಬಾಲಿಗ ನೇಮರ್, ಸಾಮಾಜಿಕ ಜಾಲತಾಣದಲ್ಲಿ ‘ಹಿಡಿಯಾಗಿ’ ನೀಡಿರುವ ಸ್ಪಷ್ಟನೆಯಿದು. ‘ನೇಮರ್ ನನ್ನ ಮೇಲೆ ಅತ್ಯಾಚಾರ ಎಸಗಿದ್ದಲ್ಲದೆ ದೈಹಿಕ ಹಲ್ಲೆ ನಡೆಸಿದ್ದಾನೆ’ ಎಂದು ಬ್ರೆಜಿಲ್‌ನ ಮಾಡೆಲಿಂಗ್ ಬೆಡಗಿಯೊಬ್ಬಳು ಹೊರಿಸಿರುವ ಆರೋಪಕ್ಕೆ ಈಗ ರೆಕ್ಕೆಪುಕ್ಕಗಳೆಲ್ಲ ಹುಟ್ಟಿಕೊಂಡಿವೆ. ಆಕೆ ಜಾಲತಾಣದಲ್ಲಿ ಕಳೆದ ವಾರ ಹರಿಬಿಟ್ಟಿರುವ ವಿಡಿಯೊವೊಂದು ವೈರಲ್ ಆಗಿದೆ. ಪ್ಯಾರಿಸ್‌ನ ಐಷಾರಾಮಿ ಹೋಟೆಲ್ಲಿನ ಕೋಣೆಯೊಂದರಲ್ಲಿ ವ್ಯಕ್ತಿಯೊಬ್ಬ ಹಾಸಿಗೆಯ ಮೇಲೆ ಅಂಗಾತ ಮಲಗುವುದು, ಆತನ ಮೇಲೆ ತರುಣಿಯೊಬ್ಬಳು ಬಂದು ಮಲಗುವುದು, ಸ್ವಲ್ಪ ಹೊತ್ತಿನಲ್ಲೇ ಸಿಟ್ಟಿಗೆದ್ದು ಆಕೆ ಆತನನ್ನು ಹೊಡೆಯುವುದು, ಆತ ‘ಬೇಡ.. ಹೊಡೆಯಬೇಡ’ ಎನ್ನುವುದು– ಈ ವಿಡಿಯೊದಲ್ಲಿ ದಾಖಲಾಗಿದೆ. ‘ಈ ವಿಡಿಯೊದಲ್ಲಿ ಇರುವುದು ನಾನು ಮತ್ತು ನೇಮರ್’ ಎಂದು ಆ ತರುಣಿ ಹೇಳಿಕೊಂಡಿದ್ದಾಳೆ.

ಈ ವಿಡಿಯೊಗೆ ಪ್ರತಿಯಾಗಿ, ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಲೆಂದು ನೇಮರ್ ಕೆಲವು ವಾಟ್ಸ್‌ಆ್ಯಪ್ ಫೋಟೊಗಳನ್ನು ಮತ್ತು ಟೆಕ್ಸ್ಟ್‌ಗಳನ್ನು ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ. ಆ ಹುಡುಗಿಯ ಜೊತೆ ನಿಕಟವಾಗಿದ್ದ ದೃಶ್ಯ ಮತ್ತು ಖಾಸಗಿ ಮಾತುಕತೆಯ ವಿವರಗಳು ಅದರಲ್ಲಿದ್ದವು. ಆದರೆ ಅದೂ ಈಗ ನೇಮರ್‌ಗೆ ತಿರುಗುಬಾಣವಾಗಿದೆ. ‘ವ್ಯಕ್ತಿಗಳ ನಡುವಣ ಖಾಸಗಿ ವಿಷಯಗಳನ್ನು ಬಹಿರಂಗಪಡಿಸಿದ’ ಆರೋಪದ ಮೇಲೆ ಪೊಲೀಸರು ಇನ್ನೊಂದು ಮೊಕದ್ದಮೆ ದಾಖಲಿಸಿದ್ದಾರೆ! (ಆ ವಿವರಗಳನ್ನು ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್ ಈಗ ಅಳಿಸಿಹಾಕಿದೆ.)

ನೇಮರ್ ಡ ಸಿಲ್ವ ಸ್ಯಾಂಟೊಸ್ ಜೂನಿಯರ್– ಬ್ರೆಜಿಲ್‌ನ ಸೂಪರ್‌ಸ್ಟಾರ್. ಸದ್ಯಕ್ಕೆ ಫ್ರಾನ್ಸ್‌ನ ಪ್ಯಾರಿಸ್ ಸೈಂಟ್ ಜರ್ಮೇನ್ ಕ್ಲಬ್‌ನ ಸ್ಟ್ರೈಕರ್. ಡ್ರಿಬ್ಲಿಂಗ್, ಪಾಸಿಂಗ್, ಫಿನಿಷಿಂಗ್, ವೇಗ ಮತ್ತು ದೈಹಿಕ ಸಾಮರ್ಥ್ಯ ಎಲ್ಲದರಲ್ಲೂ ಅಸಾಮಾನ್ಯ. ಈತನ ಇನ್ನೊಂದು ವೈಶಿಷ್ಟ್ಯವೆಂದರೆ ಎರಡೂ ಕಾಲುಗಳ ಒದೆತ. ಈತನ ಆಟ ನೋಡಲೆಂದೇ ಲಕ್ಷಾಂತರ ಜನ ಸ್ಟೇಡಿಯಂಗೆ ಬರುತ್ತಾರೆ. ಇನ್ನೂ 27ರ ಹರೆಯದ ನೇಮರ್, ಕಳೆದ 10 ವರ್ಷಗಳಲ್ಲಿ ಫುಟ್‌ಬಾಲ್ ಲೋಕದ ಅತ್ಯುತ್ತಮ ಆಟಗಾರನಾಗಿ ಬೆಳೆದದ್ದು ಒಂದು ರೋಚಕ ಕಥನ. ಇವತ್ತು ಜಗತ್ತಿನ ಅತ್ಯುತ್ತಮ ಐವರು ಫುಟ್‌ಬಾಲ್ ಆಟಗಾರರ ಪಟ್ಟಿಯನ್ನು ಮಾಡಿದರೆ, ಖಂಡಿತ ಅದರಲ್ಲಿ ನೇಮರ್ ಹೆಸರಿರುತ್ತದೆ. 17ರ ಹರೆಯದಲ್ಲಿ ವೃತ್ತಿಪರ ಸ್ಯಾಂಟೊಸ್ ಫುಟ್‌ಬಾಲ್ ಕ್ಲಬ್ ಸೇರಿ, ಮೂರು ವರ್ಷಗಳಲ್ಲಿ ಕ್ಲಬ್ ಎರಡು ಪ್ರತಿಷ್ಠಿತ ಕಪ್‌ಗಳನ್ನು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ. ಅದಕ್ಕೆ ತಕ್ಕಂತೆ 2011 ಮತ್ತು 12ರಲ್ಲಿ ಎರಡು ವರ್ಷ ಸತತವಾಗಿ ‘ದಕ್ಷಿಣ ಅಮೆರಿಕದ ವರ್ಷದ ಫುಟ್‌ಬಾಲಿಗ’ ಪ್ರಶಸ್ತಿ ಗೆದ್ದುಕೊಂಡ. ಯೂರೋಪ್ ಈತನನ್ನು ಕೈಬೀಸಿ ಕರೆಯಿತು. ಯೂರೋಪಿನ ಪ್ರತಿಷ್ಠಿತ ಬಾರ್ಸಿಲೊನಾ ಕ್ಲಬ್ ಸೇರಿದ ನೇಮರ್, ಅದಾಗಲೇ ಫುಟ್‌ಬಾಲ್ ಲೋಕದ ದಿಗ್ಗಜರಾಗಿದ್ದ ಲಯನೆಲ್ ಮೆಸ್ಸಿ ಮತ್ತು ಲೂಯಿಸ್ ಸಾರೆಜ್ ಜತೆಗೂಡಿ ಕ್ಲಬ್ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ. ಬಾರ್ಸಿಲೊನಾ ತಂಡದಲ್ಲಿ ಈತನ ಪ್ರತಿಭೆಗೆ ಮೆರುಗು ಕೊಟ್ಟದ್ದು ಮೆಸ್ಸಿಯ ಜೊತೆಯಾಟ.

18ರ ಹರೆಯದಲ್ಲಿ ಬ್ರೆಜಿಲ್ ರಾಷ್ಟ್ರೀಯ ತಂಡಕ್ಕೆ ಎಂಟ್ರಿ ಪಡೆದ ನೇಮರ್, 97 ಪಂದ್ಯಗಳಲ್ಲಿ ದೇಶದ ಪರ 60 ಗೋಲುಗಳನ್ನು ಹೊಡೆದಿದ್ದಾನೆ. ಪೆಲೆ ಮತ್ತು ರೊನಾಲ್ಡೊ ಬಿಟ್ಟರೆ ಬ್ರೆಜಿಲ್ ಪರ ಇಷ್ಟೊಂದು ಗೋಲುಗಳನ್ನು ಹೊಡೆದ ಇನ್ನೊಬ್ಬರಿಲ್ಲ. 2013ರಲ್ಲಿ ಫಿಫಾ ಕನ್ಫೆಡರೇಷನ್ ಕಪ್‌ನಲ್ಲಿ ಟೂರ್ನಿಯ ಆಟಗಾರನಾಗಿ ‘ಚಿನ್ನದ ಚೆಂಡು’ ಗೆದ್ದುಕೊಂಡ. 2016ರ ಒಲಿಂಪಿಕ್ಸ್‌ನಲ್ಲಿ ಬ್ರೆಜಿಲ್ ಮೊದಲ ಫುಟ್‌ಬಾಲ್ ಚಿನ್ನ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ. ಕಳೆದ ವರ್ಷ ಫಿಫಾ ವಿಶ್ವಕಪ್‌ನಲ್ಲೂ ಸಖತ್ತಾಗಿ ಮಿಂಚಿದ. ಬಾರ್ಸಿಲೊನಾ ಕ್ಲಬ್‌ನಲ್ಲಿದ್ದ ಈತನನ್ನು 2017ರಲ್ಲಿ ಪ್ಯಾರಿಸ್ ಸೈಂಟ್ ಜರ್ಮೇನ್ ಕ್ಲಬ್ 222 ದಶಲಕ್ಷ ಪೌಂಡ್ ನೀಡಿ ಖರೀದಿಸಿತು. ಇತಿಹಾಸದಲ್ಲೇ ಅದು ಅತ್ಯಂತ ದುಬಾರಿ ಖರೀದಿಯೆಂದು ಹೆಸರಾಯಿತು.

2012 ಮತ್ತು 13ರಲ್ಲಿ ‘ಅತ್ಯಧಿಕ ಮಾರ್ಕೆಟ್ ಇದ್ದ ಆಟಗಾರ’, 2016ರಲ್ಲಿ ‘ವಿಶ್ವದ ನಾಲ್ಕನೇ ಅತ್ಯಂತ ಪ್ರಸಿದ್ಧ ಕ್ರೀಡಾಳು’, 2017ರಲ್ಲಿ ‘ಜಗತ್ತಿನ ಅತ್ಯಂತ ಪ್ರಭಾವಶಾಲಿ 10 ವ್ಯಕ್ತಿಗಳಲ್ಲಿ ಒಬ್ಬ’, 2018ರಲ್ಲಿ ‘ಜಗತ್ತಿನ ಮೂವರು ಅತ್ಯಂತ ದುಬಾರಿ ಫುಟ್‌ಬಾಲಿಗರಲ್ಲಿ ಒಬ್ಬ’ ಎನ್ನುವುದು ಈತನ ಹೆಗ್ಗಳಿಕೆ. 2018ರಲ್ಲಿ ಈತನ ವಾರ್ಷಿಕ ಗಳಿಕೆ 950 ಲಕ್ಷ ಡಾಲರ್!

ನೇಮರ್‌ನನ್ನು ದೈಹಿಕ ಗಾಯಗಳೂ ಇನ್ನಿಲ್ಲದಂತೆ ಕಾಡುತ್ತಿವೆ. ಕಾಲಿಗೆ ಗಾಯವಾಗಿ ಜನವರಿಯಿಂದ ಮಾರ್ಚ್‌ವರೆಗೆ 13 ಪಂದ್ಯಗಳನ್ನು ತಪ್ಪಿಸಿಕೊಂಡಿದ್ದಾನೆ. ಕಳೆದ ವಾರ ಮತ್ತೆ ಮಂಡಿಗೆ ಗಾಯವಾಗಿದೆ. ಹೀಗಾಗಿ ಕೊಪಾ ಅಮೆರಿಕ ಪಂದ್ಯಗಳಲ್ಲಿ ನೇಮರ್ ಆಡುತ್ತಿಲ್ಲ. ಮಾಡೆಲಿಂಗ್ ಬೆಡಗಿಯ ಪ್ರಕರಣದಲ್ಲಿ ಹೇಳಿಕೆ ನೀಡಲು, ವ್ಹೀಲ್‌ಚೇರ್‌ನಲ್ಲಿ ಕುಳಿತು ಪೊಲೀಸ್ ಸ್ಟೇಶನ್ನಿಗೆ ಹೋಗಿದ್ದೂ ಆಯಿತು. ಇಷ್ಟಾಗಿಯೂ ನೇಮರ್‌ಗೆ ಬೇಡಿಕೆ ಕುಗ್ಗಿಲ್ಲ. ಮತ್ತೆ ಈತನನ್ನು ಬಾರ್ಸಿಲೊನಾ ಕ್ಲಬ್‌ಗೆ ಸೇರಿಸಿಕೊಳ್ಳಬೇಕೆಂದು ಸ್ವತಃ ಮೆಸ್ಸಿ ಮತ್ತು ಲೂಯಿಸ್ ಒತ್ತಾಯಿಸುತ್ತಿದ್ದಾರೆ!

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65